ಕೋಲಾರಪತ್ರಿಕೆ

**Online Newspaper Clipping Service**

**Dtd-Friday, 5th, June- 2020**

**Page No.01**

# ಜಾಲಪ್ಪ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಕೊರೋನಾ ಸೋಂಕಿತರಿಬ್ಬರು ಗುಣಮುಖ





ಕೋಲಾರ ಜೂ ೪

ನಗರದ ಹೊರವಲಯದ ಟಮಕದಲ್ಲಿರುವ ಆರ್.ಎಲ್. ಜಾಲಪ್ಪ ಆಸ್ಪತ್ರೆ ಮತ್ತು ದೇವರಾಜ ಅರಸು ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಕೇಂದ್ರವು ಜಿಲ್ಲಾ ಆರೋಗ್ಯ ಪ್ರಾಧಿಕಾರ ಸಹಕಾರದೊಂದಿಗೆ ಎಲ್ಲ ರೀತಿಯ ಆರೋಗ್ಯ ಸೇವೆಯನ್ನು ಸಕ್ರಿಯವಾಗಿ ಸಲ್ಲಿಸುವುದರ ಜೊತೆಗೆ ಅಗತ್ಯವುಳ್ಳ ಎಲ್ಲ ತುರ್ತು ಪರಿಸ್ಥಿತಿಗಳನ್ನು ನಿಭಾಯಿಸುವಲ್ಲಿ ಮುಂಚೂಣಿಯಲ್ಲಿದೆ. ಇದರಡಿಯಲ್ಲಿ ಎಲ್ಲಾ ರೀತಿಯ ತೀವ್ರ ಉಸಿರಾಟದ ಕಾಯಿಲೆಯ ರೋಗಿಗಳಿಗೆ ವಿಶೇಷ ತಜ್ಞರಿಂದ ಚಿಕಿತ್ಸಾ ಸೇವೆಗಳನ್ನು ನೀಡುತ್ತಿದೆ.

ಆಸ್ಪತ್ರೆಯಲ್ಲಿ ಒಳರೋಗಿಗಳಾಗಿ ದಾಖಲಾಗಿದ್ದ ಇಬ್ಬರು ಕೋವಿಡ್-೧೯ ಸೋಂಕಿತ ರೋಗಿಗಳಿಗೆ ಸೂಕ್ತ ಚಿಕಿತ್ಸೆ ನೀಡಿ ಅವರನ್ನು ಸಂಪೂರ್ಣವಾಗಿ ಗುಣಪಡಿಸುವಲ್ಲಿ ಯಶಸ್ವಿಯಾಗಿದ್ದು ಅವರಿಬ್ಬರನ್ನೂ ಫಲ ತಾಂಬೂಲವನ್ನು ನೀಡಿ ಶುಭ ಶಯಗಳನ್ನು ಕೋರಿ ಆಸ್ಪತ್ರೆಯಿಂದ ಬಿಡುಗಡೆ ಮಾಡಲಾಯಿತು.

ಮತ್ತೊಬ್ಬ ಕೋವಿಡ್-೧೯ ಧನಾತ್ಮಕ ರೋಗಿಯು ಜಾಲಪ್ಪ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು ಅವರ ಆರೋಗ್ಯವೂ ಸಹ ಸುಧಾರಿಸುತ್ತಿದೆ. ಆಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿ ವೆಂಟಿಲೇಟರ್ ಅಳವಡಿಕೆಯ ಮೂರು ಪ್ರತ್ಯೇಕ ಕೋಣೆಗಳಿದ್ದು ಇದರೊಂದಿಗೆ ಋಣಾತ್ಮಕ ಒತ್ತಡದ ವಿಧಾನದೊಂದಿಗೆ ತೀವ್ರ ಸ್ವರೂಪದ ಕಾಯಿಲೆಯ ರೋಗಿಗಳಿಗೆ ದಿನ ನಿತ್ಯ ಚಿಕಿತ್ಸಾ ವ್ಯವಸ್ಥೆಯನ್ನು ಹಲವಾರು ತಿಂಗಳುಗಳಿಂದ ಮಾಡಿಕೊಂಡು ಬರಲಾಗುತ್ತಿದೆ.

ಇದರೊಂದಿಗೆ ತೀವ್ರ ಉಸಿರಾಟದ ತೊಂದರೆಯಿಂದ ನರಳುತ್ತಿರುವ ರೋಗಿಗಳಿಗೆ ಅಗತ್ಯವುಳ್ಳ ಆಮ್ಲಜನಕ ಮತ್ತು ಇತರೆ ಸೌಲಭ್ಯಗಳೊಂದಿಗೆ ಪ್ರತ್ಯೇಕ ವಾದ ವಾರ್ಡ್‌ಗಳನ್ನು ನಿಗದಿಪಡಿಸಲಾಗಿದೆ. ಜೊತೆಗೆ ವಯಸ್ಕರಿಗೆ ಮೂರು ಪ್ರತ್ಯೇಕ ಕೊಠಡಿಗಳು ಮತ್ತು ಮಕ್ಕಳಿಗೆ ನಾಲ್ಕು ಪ್ರತ್ಯೇಕ ಸುಸಜ್ಜಿತ ಕೊಠಡಿಗಳ ವ್ಯವಸ್ಥೆಯನ್ನು ಮಾಡಲಾಗಿದೆ.

ಆಸ್ಪತ್ರೆಯ ನಾಲ್ಕನೆ ಮಹಡಿಯಲ್ಲಿರುವ ಸಂಪೂರ್ಣ ಒಳರೋಗಿಯ ವಿಭಾಗವನ್ನು ಜಿಲ್ಲೆಯ ಹೆಚ್ಚುವರಿ ಶಂಕಿತ ಕೋವಿಡ್-೧೯ ಸೋಂಕಿನ ರೋಗಿಗಳ ಕ್ವಾರಂಟೈನ್‌ಗೆ ಕಾಯ್ದಿರಿಸಲಾಗಿದೆ.

ಆಸ್ಪತ್ರೆಯಲ್ಲಿ ವೈದ್ಯಕೀಯ ತಜ್ಞರು, ಮಕ್ಕಳ ತಜ್ಞರು, ಶ್ವಾಸಕೋಶ ಕಾಯಿಲೆಗಳ ಚಿಕಿತ್ಸಾ ತಜ್ಞರು, ತೀವ್ರ ನಿಗಾ ಚಿಕಿತ್ಸಾ ತಜ್ಞರು, ಕಿವಿ, ಮೂಗು ಮತ್ತು ಗಂಟಲು ತಜ್ಞರು, ನುರಿತ ಶುಶ್ರೂಷಕರು ಮತ್ತು ಸ್ವಚ್ಛತಾ ಸಿಬ್ಬಂದಿ ತಂಡವಿದ್ದು ಅವರೆಲ್ಲರೂ ತೀವ್ರ ಕಾಯಿಲೆಯಿಂದ ನರಳುತ್ತಿರುವ ರೋಗಿಗಳ ಚಿಕಿತ್ಸೆಯಲ್ಲಿದ್ದಾರೆ.

ಆಸ್ಪತ್ರೆಯು ಎನ್.ಎ.ಬಿ.ಎಲ್ ಮಾನ್ಯತೆಯ ಅಡಿಯಲ್ಲಿ ಕೋವಿಡ್-೧೯ ಮತ್ತು ಎಚ್೧ ಎನ್೧ ತಪಾಸಣೆ ಮಾಡಿ ಆರಂಭದಲ್ಲಿಯೇ ಕಾಯಿಲೆಯ ಸೋಂಕನ್ನು ಗುರ್ತಿಸಿ ಸೂಕ್ತ ಚಿಕಿತ್ಸೆ ನೀಡಲು ಆರ್.ಟಿ.-ಪಿಸಿಆರ್ ಪರೀಕ್ಷೆಯ ಕೇಂದ್ರತ್ವವನ್ನು ಪಡೆಯಲು ಪ್ರಾಮಾಣಿಕ ಪ್ರಯತ್ನ ಮಾಡಿದೆಯೆಂದು ಆರ್.ಎಲ್. ಜಾಲಪ್ಪ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರದ ವೈದ್ಯಕೀಯ ಅಧೀಕ್ಷಕರು ಮತ್ತು ದೇವರಾಜ್‌ಅರಸ್ ವೈದ್ಯಕೀಯ ಉನ್ನತ ಕಾಲೇಜಿನ ಪ್ರಾಂಶುಪಾಲರು ತಿಳಿಸಿದ್ದಾರೆ.